ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್

# ಆಯುಷ್ಮಾನ್ ಭಾರತ - ಆರೋಗ್ಯ ಕರ್ನಾಟಕ - ಪ್ರಧಾನ ಮಂತ್ರಿ ಜನಾರೋಗ್ಯ ಯೋಜನೆ

- 30.10.2018 – ರಲ್ಲಿ ಜಾರಿಯಾದ ಸಂಯೋಜಿತ ಆರೋಗ್ಯ ಯೋಜನೆ.
- ಬಿ.ಪಿ.ಎಲ್ ಕಾರ್ಡ್ ಕುಟುಂಬಗಳಿಗೆ ವಾರ್ಷಿಕ ರೂ 5 ಲಕ್ಷದವರೆಗೆ ಉಚಿತ ಚಿಕಿತ್ಸೆ.
- ಎ.ಪಿ.ಎಲ್ ಕಾರ್ಡ್ ಕುಟುಂಬಗಳಿಗೆ ಪ್ಯಾಕೇಜ್ ದರದಲ್ಲಿ 30 ರಷ್ಟು ಹಾಗೂ ರೂ 1.5 ಲಕ್ಷದ ಮಿತಿಯೊಳಗೆ ಉಚಿತ ಚಿಕಿತ್ಸೆ.

### ಅರ್ಹತಾ ಮಾನದಂಡಗಳು :

ಪಡಿತರ ಚೀಟಿ/ಆಧಾರ ಕಾರ್ಡ್ / ABPMJAY Ark

# ಅಂಗಾಂಗ ಕಸಿ ಯೋಜನೆ

- ಬಿ.ಪಿ.ಎಲ್ ಕುಟುಂಬಗಳಿಗೆ ಕಿಡ್ನಿ, ಹೃದಯ, ಲಿವರ್, ಇವುಗಳ ಅಂಗಾಂಗ ಕಸಿ ಶಸ್ತ್ರ ಚಿಕಿತ್ಸೆ ಸಂಪೂರ್ಣ ಉಚಿತ.
- ಅಂಗಾಂಗ ಶಸ್ತ್ರ ಚಿಕಿತ್ಸೆಗೆ ಒಳಗಾದ ಫಲಾನುಭವಿಗಳಿಗೆ ಅವರು ಬದುಕಿರುವವರೆಗೂ ವರ್ಷಕ್ಕೆ ರೂ 1 ಲಕ್ಷಗಳ (ಮಾಸಿಕ 10 ಸಾವಿರಾದವರೆಗೂ) ಇಮ್ಯುನೊಸಪ್ರೆಸಿವ್ ಔಷಧಗಳನ್ನು ಉಚಿತವಾಗಿ ನೀಡಿಲಾಗುತ್ತದೆ.

### ಜೀವಂತ ವ್ಯಕ್ತಿಯಿಂದ ಅಂಗಾಂಗ ದಾನ ಪಡೆದುಕೊಂಡಾಗ

ರೋಗಿಯು ಜೀವಂತ ಸಂಬಂಧಿಯಿಂದ ಅಂಗಾಂಗ ದಾನ ಪಡೆದುಕೊಂಡು ಅಂಗಾಂಗ ಕಸಿಯನ್ನು ಆಯಾ ವಿಭಾಗದ ಜಿಲ್ಲಾ ಆಸ್ಪತ್ರೆಗಳ ರೆಫರೆಲ್‌ನೊಂದಿಗೆ ಸರ್ಕಾರಿ ಆಸ್ಪತ್ರೆ ಅಥವಾ ನೊಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಅಂಗಾಂಗ ಕಸಿ ಚಿಕಿತ್ಸೆಯನ್ನು ಮಾಡಿಸಿಕೊಳ್ಳಬಹುದು.

### ಮೆದುಳು, ನಿಶ್ಕ್ರಿಯಗೊಂಡವರಿಂದ ಅಂಗಾಂಗ ದಾನ ಪಡೆದುಕೊಂಡಾಗ

ಮೆದುಳು ನಿಶ್ಕ್ರಿಯಗೊಂಡವರಿಂದ ಅಂಗಾಂಗದಾನ ಪಡೆಯುವ ರೋಗಿಯು ಯಾವುದೇ ರೆಫರಲ್ ಅವಶ್ಯಕತೆ ಇಲ್ಲದೆ, ಜೇಷ್ಠತೆ / ಸೀನಿಯಾರಿಟಿ ಪ್ರಕಾರ ಅಂಗಾಂಗ ಹಂಚಿಕೆಯೊಂದಿಗೆ ನೊಂದಾಯಿತ ಆಸ್ಪತ್ರೆಯಲ್ಲಿ ಅಂಗಾಂಗ ಕಸಿ ಚಿಕಿತ್ಸೆಯನ್ನು ಮಾಡಿಕೊಳ್ಳಬಹುದು. ಜೊತೆಗೆ ಅಂಗಾಂಗ ಕಸಿ ಚಿಕಿತ್ಸಾರ್ಥಿಯೂ ನೊಂದಾಯಿತ ಆಸ್ಪತ್ರೆಯ ಮುಖಾಂತರ ಜೀವ ಸಾರ್ಥಕತೆ (SOTTO) ಸೊಸೈಟಿಯಲ್ಲಿ ನೊಂದವಣೆ ಮಾಡಿಕೊಳ್ಳಬೇಕು.

### ಅರ್ಹತಾ ಮಾನದಂಡಗಳು :

- ಬಿಪಿಎಲ್ ಮತ್ತು ಆಧಾರ್ ಕಾರ್ಡ್
- ರಾಜ್ಯದ ನಿವಾಸಿಗಳಿಗೆ ಮೀಸಲಾಗಿರುತ್ತದೆ.

# ಕಾಕ್ಲಿಯರ್ ಇಂಪ್ಲೆಟ್ ಅಳವಡಿಕೆ

ಎಸ್.ಸಿ/ಎಸ್.ಟಿ ಮತ್ತು ಸಾಮಾನ್ಯ ವರ್ಗಕ್ಕೆ ಸೇರಿದ 8 ತಿಂಗಳಿನ ಮಗುವಿನಿಂದ 6 ವರ್ಷದವರೆಗಿನ ಮಕ್ಕಳಿಗಾಗಿ ಇರುವ ವಿಶೇಷ ಉಚಿತ ಚಿಕಿತ್ಸ ಯೋಜನೆ.

**“ ಶ್ರವಣ ದೋಷ ಮುಕ್ತ ಕರ್ನಾಟಕ ”** ಘೋಷಣೆಯ ಧ್ಯೆಯೋದ್ವೇಶದೊಂದಿಗೆ

- ಎಸ್.ಸಿ/ಎಸ್.ಟಿ ವರ್ಗದಲ್ಲಿ 67 ಫಲಾನುಭವಿಗಳಿಗೆ (ಮಕ್ಕಳಿಗೆ)
- ಸಾಮಾನ್ಯ ವರ್ಗದಲ್ಲಿ 500 ಫಲಾನುಭವಿಗಳಿಗೆ (ಮಕ್ಕಳಿಗೆ)
- ಈ ಯೋಜನೆಯು ಕರ್ನಾಟಕ ನಿವಾಸಿಗಳಿಗೆ ಮಾತ್ರ ಮೀಸಲಾಗಿರುತ್ತದೆ.

**ನಿಮ್ಮ ಆರೋಗ್ಯ ನಮ್ಮ ಬದ್ಧತೆ**

## ರಾಜ್ಯದಲ್ಲಿನ ಎಸ್‌ಸಿಪಿ/ಟಿಎಸ್‌ಪಿ ಫಲಾನುಭವಿಗಳಿಗೆ ವಿರಳ ಮತ್ತು ಅತಿಹೆಚ್ಚು ಚಿಕಿತ್ಸೆ ವೆಚ್ಚ ತಗಲುವ ಖಾಯಿಲೆಗಳಿಗೆ ಯೋಜನೆ:

ಮಕ್ಕಳಲ್ಲಿ ಕಂಡುಬರುವ ಅಪರೂಪದ ಮೆಟಬಾಲಿಕ್ ಅಸ್ವಸ್ಥತೆಗಳು ಹಾಗೂ ಹೆಚ್ಚಿನ ವೆಚ್ಚದ ಮೂಳೆ ಮಜ್ಜೆಯ ಕಸಿ (ಕಿದ್ವಾಯಿ ಹಾಗೂ ನಾರಾಯಣ ಹೃದಯಾಲಯ ಆಸ್ಪತ್ರೆ, ಬೆಂಗಳೂರು ಹಾಗೂ ಇನ್ನಿತರೆ 13 ಆಸ್ಪತ್ರೆಗಳಲ್ಲಿ ಚಿಕಿತ್ಸೆ ಸೌಲಭ್ಯ ಲಭ್ಯ (Bone Marrow Transplant), ಮೂತ್ರಪಿಂಡ ಕಸಿ ನೆಫ್ರೋಯುರಾಲಜಿ ಆಸ್ಪತ್ರೆ ಬೆಂಗಳೂರು ಮತ್ತು ಇನ್ನಿತರೆ 10 ಆಸ್ಪತ್ರೆಗಳಲ್ಲಿ ಚಿಕಿತ್ಸಾ ವ್ಯವಸ್ಥೆ (Kidney Transplant), ರೊಬೊಟಿಕ್ ಶಸ್ತ್ರಚಿಕಿತ್ಸೆ (ಕೆಲವೊಂದು ಚಿಕಿತ್ಸೆ ವಿಧಾನಗಳಿಗೆ ಮಾತ್ರ ಸೀಮಿತ) ಹಾಗೂ ಇಮ್ಯುನೊಸಪ್ರೆಸಿವ್ ಔಷಧಗಳನ್ನು (Immunosuppressive Medication) ನೀಡಲಾಗುತ್ತದೆ. ಈ ಯೋಜನೆಗಳಿಗೆ ಇಂದಿರಾಗಾಂಧಿ **ಇನ್ಸಿಟ್ಯೂಟ್ ಆಫ್ ಚೈಲ್ಡ್ ಹೆಲ್ತ್ ಹಾಗೂ ಕಿದ್ವಾಯಿ** ಆಸ್ಪತ್ರೆಗಳು ನೋಡಲ್ ಕೇಂದ್ರಗಳಾಗಿವೆ. 76 ವಿಧದ ಕಾರ್ಯವಿಧಾನಗಳನ್ನು ಒಳಗೊಂಡಿದೆ.

## ಅಪಘಾತ ಸಂತ್ರಸ್ತರ ಯೋಜನೆ

ಈ ಯೋಜನೆಯು ರಸ್ತೆ ಅಪಘಾತ ಹೊಂದಿದ ವ್ಯಕ್ತಿಗಳಿಗೆ **AB-ArK** ಯೋಜನೆಯಡಿಯಲ್ಲಿನ ತುರ್ತು ಚಿಕಿತ್ಸೆ ನೀಡುವ ಸೌಲಭ್ಯವಾಗಿದೆ.

ಬಿಪಿಎಲ್/ಎಪಿಎಲ್ ಕಾರ್ಡ್‌ಗಳ ಫಲಾನುಭವಿಗಳಿಗೆ ಅಪಘಾತ ಉಂಟಾದ ಸಂದರ್ಭದಲ್ಲಿ ಅವರ ಜೀವಕ್ಕೆ ಸಿಗುವ ಆ 1 ಗಂಟೆಯ ಸುವರ್ಣ ಸಮಯದಿಂದ 48 ಗಂಟೆಗಳವರೆಗೆ ನೀಡುವ ತುರ್ತು ಚಿಕಿತ್ಸಾ ಯೋಜನೆಯಾಗಿದೆ. AB-ArK ಯೋಜನೆ ಅಡಿಯಲ್ಲಿ ಎಲ್ಲಾ ನೊಂದಾಯಿತ ಆಸ್ಪತ್ರೆಗಳ ಮೂಲಕ ಗುರುತಿಸಲಾದ 76 ಕಾರ್ಯವಿಧಾನಗಳ ಚಿಕಿತ್ಸೆ ಸೌಲಭ್ಯಗಳೊಂದಿಗೆ ಕಾರ್ಯಗತಗೊಳಿಸಲಾಗಿದೆ.

## ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ RBSK (0 – 18 ವರ್ಷ)

- ಅಂಗನವಾಡಿ ಮಕ್ಕಳಿಂದ 18 ವರ್ಷದವರೆಗಿನ ಸರ್ಕಾರಿ ಶಾಲೆ, ವಸತಿ ಶಾಲೆ, ಅನುದಾನಿತ ಶಾಲಾ– ಕಾಲೇಜ್ ಮಕ್ಕಳಿಗೆ ಸೀಮಿತವಾಗಿರುತ್ತದೆ.
- ಹೃದಯ ರೋಗ, ದಂತ ಚಿಕಿತ್ಸೆ,ನರ ರೋಗ, ನವಜಾತ ಶಿಶು ಮತ್ತು ಮಕ್ಕಳ ಖಾಯಿಲೆ, ಮೂತ್ರಪಿಂಡದ ಖಾಯಿಲೆಗಳಿಗೆ ಉಚಿತ ಚಿಕಿತ್ಸೆಯೂ 93 ಚಿಕಿತ್ಸಾ ವಿಧಾನಗಳಲ್ಲಿ ಸೀಮಿತವಾಗಿರುತ್ತದೆ.
- ಮೊಬೈಲ್ ಹೆಲ್ತ್ ಟೀಮ್ ಮೂಲಕ ಪಡೆದ ರೆಫರಲ್‌ನೊಂದಿಗೆ ಸರ್ಕಾರಿ ಮತ್ತು ನೊಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದು.

## ಜ್ಯೋತಿ ಸಂಜೀವಿನಿ ಯೋಜನೆ

- ರಾಜ್ಯ ಸರ್ಕಾರ ನೌಕರರು ಮತ್ತು ಅವರ ಕುಟುಂಬಕ್ಕೆ ಗಂಭೀರ ಖಾಯಿಲೆಗಳಿಗೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ನಗದು ರಹಿತ ಚಿಕಿತ್ಸೆ.
- ಹೃದ್ರೋಗ, ಕ್ಯಾನ್ಸರ್, ನರರೋಗ, ಮೂತ್ರಪಿಂಡದ ಖಾಯಿಲೆ, ಸುಟ್ಟುಗಾಯ, ಗಂಭೀರ ಸ್ವರೂಪದ ಅಪಘಾತ ಮತ್ತು ಚಿಕ್ಕ ಮಕ್ಕಳ ಖಾಯಿಲೆಗಳಿಗೂ ಸಂಬಂಧಿಸಿದ ಚಿಕಿತ್ಸೆಗಳನ್ನು ಒಳಗೊಂಡಿದೆ.
- ನೊಂದಾಯಿತ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಮಾತ್ರ ಈ ಯೋಜನೆಯ ಸೇವೆ ಲಭ್ಯವಿರುತ್ತದೆ.

### ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

ಸರ್ಕಾರಿ ಆಸ್ಪತ್ರೆ, ತಾಲೂಕು ಆಸ್ಪತ್ರೆ ಮತ್ತು ಜಿಲ್ಲಾ ಆಸ್ಪತ್ರೆಗಳ ಆರೋಗ್ಯಮಿತ್ರರು, ನೊಂದಾಯಿತ ಆಸ್ಪತ್ರೆಗಳ ಆರೋಗ್ಯಮಿತ್ರರು, ಆಶಾ ಕಾರ್ಯಕರ್ತೆಯರು. ಟೋಲ್ ಫ್ರೀ ಸಂಖ್ಯೆ : **18004258330.**

**website:**www.sast.karnataka.gov.in/home & www.arogya.karnataka.gov.in

## ಎಲ್ಲಾರಿಗೂ ಆರೋಗ್ಯ ,ಎಲ್ಲೆಡೆಯೂ ಆರೋಗ್ಯ